ಆದಾಗ್ಯೂ 1999-2000ನೇ ಸಾಲಿನಲ್ಲಿ 3 ಸಂಸ್ಥೆಗಳು ಈ ಕೆಳಗಿನಂತೆ ಲಾಭ/ನಷ್ಟಗಳಿಸಬಹುದೆಂದು ಅಂದಾಜು ಮಾಡಲಾಗಿದೆ.

ಸಂಸ್ಥೆ	(ರೂ.ಕೋಟಿಗಳಲ್ಲಿ) ಲಾಭ :ನಷ್ಟ)
ಕ.ರಾ.ರ.ಸಾ.ಸಂಸ್ಥೆ	- 17.57
ಬೆಂ.ಮ.ನ.ಸಾ.ಸಂಸ್ಥೆ	- 6.00
ವಾ.ಕ.ರ.ಸಾ.ಸಂಸ್ಥೆ	- 0.07
ಒಟ್ಟು	- 11.60

ಆ) ಸಂಸ್ಥೆಯ ನಷ್ಟ ಅನುಭವಿಸಲು ಪ್ರಮುಖಕಾರಣಗಳು ಕೆಳಕಂಡಂತಿವೆ.

1. ಆರ್ಥಿಕವಾಗಿ ಲಾಭದಾಯಕವಲ್ಲದ ಮತ್ತು ಅನಿವಾರ್ಯವಾದ ಮಾರ್ಗಗಳಲ್ಲಿ ಸಾರಿಗೆ ಗಳನ್ನು ಕಾರ್ಯಾಚರಣೆ ಗೊಳಿಸುವುದು.
2. ವಿದ್ಯಾರ್ಥಿಗಳು, ಅಂಧರು ಮತ್ತು ಪತ್ರಕರ್ತರಿಗೆ ವಿಸ್ತರಿಸಲಾದ ರಿಯಾಯಿತಿಯಿಂದ ಉಂಟಾದ ಆದಾಯ ನಷ್ಟ.
3. ಕಾಲಕಾಲಕ್ಕೆ ನೌಕರರಿಗೆ ಹೆಚ್ಚಿಸಲಾದ ವೇತನದ ಪರಿಷ್ಕರಣೆ.
4. ಡೀಸಲ್ ತೈಲ, ಟೈರುಗಳು, ಟ್ಯೂಬುಗಳು, ಬಿಡಿಭಾಗಗಳು ಮತ್ತು ಇತರೆ ಬಳಕೆ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳದಿಂದ ವೆಚ್ಚದಬಾಬ್ತುಗಳಲ್ಲಿ ಏರಿಕೆ.
5. ಕಾರ್ಯಾಚರಣೆವೆಚ್ಚಏರಿಕೆಯಾದಂತೆಲ್ಲಾಪ್ರಯಾಣಿಕರಬಸ್‌ದರಗಳನ್ನು ಹೆಚ್ಚಿಸಿಲ್ಲದಿರುವುದು.
6. ಖಾಸಗಿ ಪ್ರವರ್ತಕರು ಮತ್ತುಮ್ಯಾಕ್ಸಿಕ್ಯಾಬ್‌ಗಳ ಕಳ್ಳಾಟಿಕೆಯಿಂದ ಸಂಸ್ಥೆಯನ್ಯಾಯ ಸಮ್ಮತ ಆದಾಯವನ್ನು ಲಪಟಾಯಿಸುವುದು.

ಹುಬ್ಬಳ್ಳಿ ನಗರದಲ್ಲಿರುವ ಕೇಂದ್ರ ಬಸ್‌ನಿಲ್ದಾಣ

1153 (1453) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಹೊಸದಾಗಿ ಪ್ರಾರಂಭಿಸಲಾದ ಕೇಂದ್ರ ಬಸ್ ನಿಲ್ದಾಣ ನಗರದಿಂದ ತುಂಬಾ ದೂರವಿದ್ದು, ಸಾರ್ವಜನಿಕರು ಅನುಭವಿಸುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು.

ಇ) ಹಳೇ ಬಸ್ ನಿಲ್ದಾಣದಿಂದ 80 ಕಿ.ಮಿ ಅಂತರದ ಊರುಗಳಿಗೆ ಬಸ್ಸುಗಳನ್ನು ಓಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಆ) ಹಳೆ ಬಸ್ ನಿಲ್ದಾಣದಿಂದ ಹೊಸ ಬಸ್ ನಿಲ್ದಾಣಕ್ಕೆ ಪ್ರಯಾಣಿಕರ ಸೌಕರ್ಯಕ್ಕಾಗಿ, ಪ್ರತಿ ನಿಮಿಷಕ್ಕೆ ಒಂದರಂತೆ, ನಗರ ಸಾರಿಗೆ ಬಸ್ಸುಗಳನ್ನು ಒದಗಿಸಲಾಗಿದೆ. ಹಳೇ ಬಸ್ ನಿಲ್ದಾಣವನ್ನು ನಗರ ಹಾಗೂ ಉಪನಗರ ಸಾರಿಗೆ ಕಾರ್ಯಾಚರಣೆಗೆ ಸೀಮಿತಗೊಳಿಸಿ, ಈಗಾಗಲೇ 1000 ಕ್ಕೂ ಮಿಗಿಲಾಗಿ ಟ್ರಿಪ್‌ಗಳು ಕಾರ್ಯಾಚರಣೆಯಾಗುತ್ತಿವೆ. ನಗರ ಹಾಗೂ ಉಪನಗರ ಸಾರಿಗೆಗಳನ್ನು ಇನ್ನೂ ಹೆಚ್ಚುಗೊಳಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.

ಇ) ಇಲ್ಲ

ಕಂದಾಯ ಪ್ರಾಧಿಕಾರದಲ್ಲಿರುವ ಬಾಕಿ ಇರುವ ಅಪಮೌಲ್ಯ ಪ್ರಕರಣಗಳು

1154 (1400) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ಹಾಗೂ ಗುಲ್ಬರ್ಗಾ ನಗರದಲ್ಲಿ ಕಂದಾಯ ಪ್ರಾಧಿಕಾರಿಗಳ ಮುಂದೆ ಇತ್ಯರ್ಥವಾಗದೇ ಬಾಕಿ ಉಳಿದಿರುವ ಅಪಮೌಲ್ಯ ಪ್ರಕರಣಗಳು ಎಷ್ಟು? (ನಗರವಾರು ವಿವರಗಳನ್ನು ಮತ್ತು ಅಪಮೌಲ್ಯದ ಹಣದ ವಿವರ ನೀಡುವುದು)

ಆ) ಈ ಅಪಮೌಲ್ಯ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸರ್ಕಾರ ತೆಗೆದುಕೊಂಡಿರುವ ನಿಲುವುಗಳೇನು; ಎಷ್ಟು ಸಮಯದಲ್ಲಿ ಇತ್ಯರ್ಥಗೊಳಿಸಲು ನಿಶ್ಚಯಿಸಲಾಗಿತ್ತು (ಪೂರ್ಣ ವಿವರ ನೀಡುವುದು)

ಶ್ರೀ ಜೆ.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ಬಾಕಿ ಉಳಿದಿರುವ ಅಪಮೌಲ್ಯ ಪ್ರಕರಣಗಳು ಹಾಗೂ ಅಪಮೌಲ್ಯದ ಮೊತ್ತದ ವಿವರಗಳನ್ನು (ನಗರವಾರು) ಈ ಕೆಳಗಿನಂತೆ ನೀಡಲಾಗಿದೆ:

ಜಿಲ್ಲೆಯ ಹೆಸರು	ಪ್ರಕರಣಗಳ ಸಂಖ್ಯೆ	ಅಪಮೌಲ್ಯ ಮೊತ್ತ (ರೂ. ಕೋಟಿಗಳಲ್ಲಿ)
ಬೆಂಗಳೂರು (ನಗರ)	18,070	145.89
ಬೆಂಗಳೂರು (ಗ್ರಾಮಾಂತರ)	2,789	19.61
ಬೆಳಗಾವಿ	14,046	11.17
ಮೈಸೂರು	834	1.40
ಮಂಗಳೂರು	179	0.93
ಹುಬ್ಬಳ್ಳಿ-ಧಾರವಾಡ	1,640	4.95
ಗುಲ್ಬರ್ಗಾ	1,190	1.79
ಒಟ್ಟು	38,748	185,74